


### ಹಾಸ್ಯ ಕಲಾವಿದರಿಗೆ ಗೌರವ

ಸುಧಾ ಜುಲೈ 19ರ ಮುಖಪುಟ ಲೇಖನ 'ಕಾಮಿಡಿ ಕಿಂಗ್ಸ್' (ಬರಹ: ಅಮಿತ್ ಎಂ.ಎಸ್.) ಸಿನಿಮಾ ಹಾಸ್ಯ ಕಲಾವಿದರಿಗೆ ನೀಡಿದ ಅಪೂರ್ವ ಗೌರವವೇ ಸರಿ. ಹಾಸ್ಯ ಕಲಾವಿದರಿಗೆ ಅಗ್ರಸ್ಥಾನ ನೀಡುವ ಮೂಲಕ 'ಸುಧಾ' ಅವಿಸ್ಮರಣೀಯ ಕೆಲಸ ಮಾಡಿದೆ.

-ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/ ನಾ.ವೆ.ಮುರ್ಥಿ, ನಾಗವಾರ/ ಮೇ.ಗೋ.ಸುಬ್ಬಣ್ಣ, ಮೇಗರವಳ್ಳಿ/ ಎ.ಕೆ.ಪಟ್ಟಾಭಿ, ಬೆಂಗಳೂರು/ ಸಂಜಯಕುಮಾರ, ಕೋಣನಕೇರಿ

### ನರಸಿಂಹರಾಜು ಅಲ್ಲ, ಹೊನ್ನಪ್ಪ

ಕನ್ನಡದ ನಟರ ಪೈಕಿ ಮದ್ರಾಸ್‌ನಲ್ಲಿ ಮೊದಲು ಮನೆ ಮಾಡಿದವರು ಕನ್ನಡ ವೃತ್ತಿ ರಂಗಭೂಮಿಯ ನಟ ಹೊನ್ನಪ್ಪ ಭಾಗವತರ್, ಲೇಖಕರು ಹೇಳಿರುವಂತೆ ನರಸಿಂಹರಾಜು ಅಲ್ಲ. ಒಂದಲ್ಲ– ಎರಡು ಮನೆ ಮಾಡಿದರು. ಹೊನ್ನಪ್ಪ ಭಾಗವತರ್ ಆ ಕಾಲಕ್ಕೆ ಹಲವು ತಮಿಳು ಸಿನಿಮಾಗಳ ಹೀರೊ ಆಗಿ ನಟಿಸಿದ್ದರು. ಮುಂದೆ ಅವರು ತಮ್ಮ ಮನೆಯನ್ನೇ ಮಾರಿ 'ಮಹಾಕವಿ ಕಾಳಿದಾಸ' ಚಿತ್ರ ನಿರ್ಮಿಸಿದರು.

-ಗುಬ್ಬಿ ರೇವಣಾರಾಧ್ಯ, ಬೆಂಗಳೂರು

### ಮಾರ್ಮಿಕ ವಿಚಾರ

ಶಿಕಾಕು ಅವರ 'ಹೂಗಳ್ಳರು' ವಿಚಾರ ಲಹರಿ ಚಿಂತನೆಗೆ ಹಚ್ಚುವಂತಿದೆ. ತಮಗೆ ಮನೆಯಂಗಳವೇ ಇರದವರು ಬೇರೆಯವರ ಅಂಗಳದಲ್ಲಿ ಹೂ ಕದಿಯುವುದು ಅಥವಾ ಕೇಳಿ ಪಡೆಯುವುದು ಬೇರೆ. ಆದರೆ ತಮ್ಮದೇ ದೊಡ್ಡ ನಿವೇಶನದಲ್ಲಿ ಒಂಚೂರು ಜಾಗ ಬಿಡದೆ ಕಟ್ಟಿಸಿಕೊಂಡು, ಇತರರ ಮನೆ ಅಂಗಳದಲ್ಲಿ ಅರಳಿರುವ ಹೂ ಕದಿಯುವುದು ಬೇರೆ. ಇಂತಹ ಪರಮಸ್ವಾರ್ಥಿಗಳ ಬಗ್ಗೆ ಬರಹ ಮಾರ್ಮಿಕವಾಗಿದೆ.

-ಸುಶೀಲಾ ಆರ್. ರಾವ್, ಉಡುಪಿ/ ಎಚ್.ಆನಂದಕುಮಾರ್, ಚಿತ್ರದುರ್ಗ/ ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/ ಬಿ.ಸಿದ್ದಲಿಂಗಪ್ಪ, ದಾವಣಗೆರೆ

### ಕಣ್ಣಿಗೆ ಹಬ್ಬ, ಮನಕ್ಕೆ ಮುದ

ಸಿ.ಎಸ್.ಸುರೇಶರ 'ಚೇಲಾವರದ ಚೆಲುವೆಯರು' ಚಿತ್ರಬರಹ ಕಣ್ಣಿಗೆ ಹಬ್ಬವಾಗಿ, ಮನಕ್ಕೆ ಮುದನೀಡಿತು.

-ನೆ.ಲ.ರಾಂ, ಬೆಂಗಳೂರು

### ಕೌಲೇದುರ್ಗ ದರ್ಶನ

ಜಿ.ಎಸ್.ಶಿವರಾಜರ 'ಕಾಡಿನೊಳಗಿನ ಕೋಟೆ ಕೌಲೇದುರ್ಗ' ಚಿತ್ರ ಬರಹ ಓದಿ ಖುಷಿಯಾಯಿತು. ಪ್ರತ್ಯಕ್ಷ ದರ್ಶನ ಮಾಡಿದ ಅನುಭವವಾಯಿತು.

-ಸೌಮಿತ್ರ, ದಾವಣಗೆರೆ

### ಅನುಕರಣೀಯ ಕುಟುಂಬ

'ಸರ್ಪಸ್ನೇಹಿ ಕುಟುಂಬ'ವನ್ನು ಟಿ.ಶಿವಕುಮಾರ್ ಪರಿಚಯಿಸಿದ್ದಾರೆ. ಕುಟುಂಬ ಅನುಕರಣೀಯವಾಗಿದೆ.

-ಎಸ್.ನಿತ್ಯ ರತ್ನಗಿರಿ, ಮೂಡಬಿದರೆ

### ಪುರಾಣ ಕಥೆ ಸ್ವಾಗತಾರ್ಹ

ರಾಮಾಯಣ ಮಹಾಗ್ರಂಥದ ಚಿಕ್ಕದೊಂದು ಪ್ರಸಂಗವನ್ನು 'ಹಸಿವು' ಎಂಬ ಸುಂದರ ಕಥೆಯಾಗಿಸಿದ್ದಾರೆ ಹಿರಿಯ ಕಥೆಗಾರ ಬಿ.ತಿಪ್ಪಣ್ಣ ಮರಿಕುಂಟೆ. ಅಪರೂಪಕ್ಕಾದರೂ ನಮ್ಮ ಪುರಾಣಗಳ ಕಥೆಗಳು ಪ್ರಕಟವಾಗುತ್ತಿರುವುದು 'ಸುಧಾ' ಪತ್ರಿಕೆಯಲ್ಲಿ ಮಾತ್ರ.

-ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ/ ಆರ್.ನಂದಕುಮಾರ್ ನಿಟುವಳ್ಳಿ, ದಾವಣಗೆರೆ/ ಸಮಾದಪ್ಪ, ಟಿ.ಎ.ಟಿ.ಬಾಬು, ಚಿತ್ರದುರ್ಗ

### ಹಸಿವಿನ ರೂಪಕ

ವಾಲ್ಮೀಕಿ ರಾಮಾಯಣದ ಮೂಲಕ್ಕೆ ಚ್ಯುತಿ ತರದ 'ಹಸಿವು' ಕಥೆ ಇಂದಿನ ಆಳುವವರ ಹಸಿವಿಗೆ ರೂಪಕಾತ್ಮಕವಾಗಿದೆ.

-ಡಾ.ಜಿ.ಕೃಷ್ಣಪ್ಪ, ಬೆಂಗಳೂರು

### ಸುಖೀಭವದಲ್ಲಿ ಕಾಲ್ಪನಿಕ ಪ್ರಶ್ನೆ!

'ಸುಖೀಭವ' ಅಂಕಣದಲ್ಲಿ ಡಾ.ವಿನೋದ ಛೆಬ್ಬಿಯವರು ಕೆಲವು ಕಾಲ್ಪನಿಕ ಪ್ರಶ್ನೆಗಳನ್ನು ತಾವೇ ಬರೆದುಕೊಂಡು ಉತ್ತರ ಕೊಡುತ್ತಿದ್ದಾರೆ ಎಂಬ ಸಂಶಯ ನನ್ನದು.

-ವೈ.ಯಂ.ಚಂದ್ರಶೇಖರ್, ಸಿದ್ದಾಪುರ

### ನಾಟಕ ರಚನಾ ಸ್ಪರ್ಧೆ

ರಂಗ ನಿರ್ದೇಶಕ ದಿ.ಆರ್. ನಾಗೇಶ್ ನೆನಪಿಗೆ 'ಜನಪರ ನಾಟಕ ರಚನಾ ಸ್ಪರ್ಧೆ'ಯನ್ನು ಮಂಥನ ಸಾಂಸ್ಕೃತಿಕ ಸಂಘವು ಏರ್ಪಡಿಸಿದೆ. ಡಿಟಿಪಿ ಮಾಡಿದ ಹೊಸ ನಾಟಕದ ಎರಡು ಪ್ರತಿಗಳ ಜತೆಗೆ ನಾಟಕದ ಬಗ್ಗೆ 2 ಪುಟಗಳಲ್ಲಿ ಸಂಕ್ಷಿಪ್ತವಾಗಿ ಬರೆದು ಸೆಪ್ಟೆಂಬರ್ 10ರ ಒಳಗಾಗಿ ಆರ್. ಪ್ರಕಾಶ್ ಅರಸು, ನಂ.204, 5ನೇ ಎ ಅಡ್ಡರಸ್ತೆ, 5ನೇ ಮುಖ್ಯರಸ್ತೆ, ಬಾಹುಬಲಿನಗರ, ಜಾಲಹಳ್ಳಿ (ಅಂಚೆ), ಬೆಂಗಳೂರು– 560013– ಈ ವಿಳಾಸಕ್ಕೆ ಕಳಿಸಿಕೊಡುವಂತೆ ಕೋರಲಾಗಿದೆ.
ಹೆಚ್ಚಿನ ವಿವರಗಳಿಗೆ 9448353819 ಸಂಪರ್ಕಿಸಿ.

---

### ನಕ್ಕುಬಿಡಿ

ಮೈಕ್ರೋಸಾಫ್ಟ್ ತನ್ನ ಎರಡು ಹೊಸ ಸಾಫ್ಟ್‌ವೇರ್‌ಗಳಿಗೆ 'ಅಫ್ಜಲ್' ಮತ್ತು 'ಕಸಾಬ್' ಎಂದು ಹೆಸರಿಟ್ಟಿತ್ತು.
'ಗೇಟ್ಸ್' ಯಾಕೆ ಎಂದು ಕೇಳಿದಾಗ ಹೇಳಿದ್ದು.
'ಯಾಕೆಂದರೆ, ಅವೆರಡು ಯಾವಾಗಲೂ ಹ್ಯಾಂಗ್ ಆಗಲ್ಲ ಅದಕ್ಕೆ.'

ಟೀಚರ್: ಗುಂಡಾ, ಯಾಕೋ ಮಾರ್ಕ್ಸ್‌ಕಾರ್ಡ್‌ನಲ್ಲಿ ಮಾರ್ಕ್ಸ್ ತಿದ್ದಿದ್ದೀಯಾ?
ಗುಂಡಾ: ನೀವೇ ಹೇಳಿದ್ರಲ್ಲಾ ಮೇಡಂ, ನಮ್ಮ ನಮ್ಮ ತಪ್ಪನ್ನ ನಾವೇ ತಿದ್ದಿಕೋಬೇಕು ಅಂತಾ ಅದಕ್ಕೆ ತಿದ್ದಿದೆ.

ಸಂಗ್ರಹ:ಇಂದು



ಪೊಲೀಸ್: ಅಲ್ಲಯ್ಯಾ ನೀನು ಒಂದು ಸಾರಿ ಕಳ್ಳತನ ಮಾಡಿದ್ದು ಸಾಲದು ಅಂತ ಪುನಃ ಅದೇ ಅಂಗಡಿಗೆ ಯಾಕೆ ಹೋದೆ?
ಕಳ್ಳ: ಆ ಅಂಗಡಿಯಲ್ಲಿ ನಮಸ್ಕಾರ ಪುನಃ ಬನ್ನಿ ಎಂದು ಬೋರ್ಡ್ ಹಾಕಿದ್ರು ಅದಕ್ಕೆ.

★ ★ ★

ಶಿಕ್ಷಕ: ರಾಜಾ ರಾಮ್ ಮೋಹನರಾಯರು ಯಾರು?
ವಿದ್ಯಾರ್ಥಿ: ಸರ್, ಅವರು ಮೂವರೂ ಆತ್ಮೀಯ ಸ್ನೇಹಿತರು.

ಸಂಗ್ರಹ: ಎ.ವಿ. ಪದ್ಮಾವತಿ




ಸಿ.ಸಿ. ಕ್ಯಾಮರಾ
ಅಪ್ಪ: ನಮ್ಮ ಕಾಲ್ದಲ್ಲಿ 10 ರೂಪಾಯಿ ತಗೊಂಡು ಹೋದ್ರೆ ಅಕ್ಕಿ, ಬೇಳೆ, ಮೊಸರು ಎಲ್ಲಾ ತರ್‍ತಿದ್ವಿ.
ಮಗ: ಈಗ ಅದೆಲ್ಲಾ ಸಾಧ್ಯ ಇಲ್ಲ ಅಪ್ಪಾ... ಎಲ್ಲಾ ಅಂಗಡಿಗಳಲ್ಲೂ ಸಿ.ಸಿ. ಕ್ಯಾಮೆರಾ ಇಟ್ಟಿರ್‍ತಾರೆ.

ಸಂಗ್ರಹ: ಸುಮಾ ಕಳಸಾಪುರ